<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ</u>

ಸಿ.ಸಿ.ನಂಃ 1067/2020

ಚಾಸಾಃ( 01 ) ಪ್ರಾಸಾ ( 01 )

ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ದಿನಾಂಕಃ 03-11-2025

| | |
|---|---|
| ಸಾಕ್ಷಿದಾರರ ಹೆಸರು | ಅಮರೇಶ |
| ತಂದೆ ಹೆಸರು | ಜಂಬಣ್ಣ ಹೂಗಾರ |
| ವಯಸ್ಸು | 28 ವರ್ಷ, |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ವದಗನಾಳ |

**<u>ಮುಖ್ಯ ವಿಚಾರಣೆಃ ಸಸಅ ರವರಿಂದ:</u>**

ಮೃತ ಗವಿಸಿದ್ದಪ್ಪ ನನ್ನ ಅಣ್ಣ. ಸುಮಾರು 4 ವರ್ಷಗಳ ಹಿಂದೆ ಅಪಘಾತದ ಹಿನ್ನಲೆಯಲ್ಲಿ ಮರಣ ಹೊಂದಿರುತ್ತಾನೆ. ಅಪಘಾತ ಹೇಗೆ ಅಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತವಾದ ನಂತರ ನನ್ನ ಅಣ್ಣನನ್ನು ಆಸ್ಪತ್ರೆಗೆ ದಾಖಲಿಸಿದ ನಂತರ ಚಾಸಾ 6 ರವರು ನನಗೆ ದೂರವಾಣಿ ಮೂಲಕ ಸದರಿ ಅಪಘಾತದ ಬಗ್ಗೆ ತಿಳಿಸಿರುತ್ತಾರೆ. ಹಿರೇಸಿಂದೋಗಿ ಬಳಿ ಬೆ. 11.30 ರ ಸಮಾರಿಗೆ ಅಪಘಾತವಾಗಿರುವುದಾಗಿ ತಿಳಿಸಿರುತ್ತಾರೆ. ನಂತರ ನಾನು ನೇರವಾಗಿ ಆಸ್ಪತ್ರೆಗೆ ಹೋಗಿ ನೋಡಲಾಗಿ ನನ್ನ ಸಹೋದರನಿಗೆ ತಲೆಗೆ ತೀವ್ರ ಸ್ವರೂಪದ ಗಾಯವಾಗಿದ್ದು, ಸದರಿ ಚಿಕಿತ್ಸೆ ಪಲಕಾರಿಯಾಗದೇ ಮೃತ ಪಟ್ಟಿರುತ್ತಾರೆ. ಸದರಿ ಅಪಘಾತ ಯಾರ ತಪ್ಪಿನಿಂದ ಅಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣನಿಗೆ ಯಾರು ಅಪಘಾತ ಪಡಿಸಿದರು ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಒಂದು ದಾಖಲಾತಿಯನ್ನು ನೋಡಿ ಗುರುತಿಸಿದ್ದು ಅದು ದೂರು ಅಗಿದ್ದು ಅದನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರ ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಅಂತ ಹಿಸಸಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು, ಪಾಟೀಸವಾಲಿಗೆ ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲುಃ ಸಸಅ ರವರಿಂದಃ</u>**

ದಿಃ 15-07-2020 ರಂದು ಮುಂಜಾನೆ 11.15 ಕ್ಕೆ ನನ್ನ ಸಹೋದರನಿಗೆ ಅಪಘಾತವಾದ ಬಗ್ಗೆ ಚಾಸಾ 6 ರವರು ತಿಳಿಸಿರುತ್ತಾರೆ ಎಂದರೆ ಸರಿ. ನನ್ನ ಸಹೋದರ ದ್ವಿಚಕ್ರ ವಾಹನದಲ್ಲಿ ಹಿರೇಸಿಂದೋಗಿಕಡೆಯಿಂದ ವದಗನಾಳ

ಕಡೆಗೆ ಹೋಗುತ್ತಿದ್ದಾಗ ವದಗನಾಳ ಗ್ರಾಮ ಕಡೆಯಿಂದ ಒಂದು ಟ್ರ್ಯಾಕ್ಟರ್ ಚಾಲಕ ಅತೀವೇಗವಾಗಿ ಮತ್ತು ಅಜಾಗೃಕತೆಯಿಂದ ವಾಹನವನ್ನು ಚಲಾಯಿಸಿಕೊಂಡು ಬಂದುಡಿಕ್ಕಿ ಪಸಿಡಿರುತ್ತಾನೆ ಎಂದರೆ ಸರಿಯಲ್ಲ. ನಂತರ ನನ್ನ ಸಹೋದರ ಕೆಳೆಗೆ ಬಿದ್ದು ಅತನಿಗೆ ಎಡಗಣ್ಣಿಗೆ ಮತ್ತು ಗದ್ದಕ್ಕೆ ತೀವ್ರ ಸ್ವರೂಪದ ಗಾಯಗಳು ಅಗಿದ್ದು, ಎರಡು ಮೊಣಗಾಲಿಗಳಿಗೆ ತೆರಚಿದ ಗಾಯಗಳು ಅಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನನ್ನ ಸಹೋದರನ ಹಿಂದೆ ಕುಳಿತ್ತಿದ್ದ ಚಾಸಾ 7 ರವರು ಅಪಘಾತವನ್ನು ನೋಡಿ ನನಗೆ ವಿವರಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ಟ್ರಾಕ್ಟರ್ ಚಾಲಕ ವಾಹನವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ನನ್ನ ಅಣ್ಣನ ಮೊಟಾರ ಸೈಕಲ್ ನಂ. ಕೆಎ 37 ಇಪಿ 8745 ಮತ್ತು ಅಪಘಾತ ಪಡಿಸಿದ ಟ್ರಾಕ್ಟರ್ ಇಂಜಿನ ನಂ. ಬಿ ಜಡ್ ಸಿ ಎಸ್ ಎ 58434653 ಅಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ನಂತರ ನನ್ನ ಅಣ್ಣ ಮೃತ ದೇಹವನ್ನು ಕೊಪ್ಪಳ ಜಿಲ್ಲಾ ಅಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ಮಾರನೇ ದಿನ ತನಿಖಾಧಿಕಾರಿ ಚಾಸಾ 2 ಮತ್ತು 3 ರವರೊಂದಿಗೆ ಗುನ್ನಜಾಗಕ್ಕೆ ಬಂದಿದ್ದು ನಾನು ಗುನ್ನಜಾಗವನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ಪೋಲಿಸರು ನನನ್ನು ಕರೆಯಿಸಿ ಅಪಘಾತ ಪಡಿಸಿದ ವ್ಯಕ್ತಿಯನ್ನು ತೋರಿಸಿದ್ದು ನಾನು ಮರು ಹೇಳಿಕೆಯನ್ನು ನೀಡಿರುತ್ತೆನೆ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳದಲ್ಲಿ ಪಂಚನಾಮೆ ಬರೆದು ಎರಡು ಪೊಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಒಳಗಾದ ಟ್ರಾಕ್ಟರ್ ಟ್ರೈಲರ್ ಗಳ ಎರಡು ಪೋಟೊಗಳನ್ನು ತೋರಿಸಿದಾಗ ಸದರಿ ಪೋಟೊಗಳಲ್ಲಿ ಇರುವ ವಾಹನ ನನಗೆಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ</u>**

ಎನೂ ಇಲ್ಲ.

**ಮರು ವಿಚಾರಣೆ ಇಲ್ಲ.**
**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಹೆ. ಜೆ ಎಂ ಎಫ್ ಸಿ ಕೊಪ್ಪಳ.